**OS No:279/2021**
**PW:1**

(ಇಂದು ದಿನಾಂಕಃ **19-01-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ ಟಿ ಎಚ್ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು, 1, 6 ಹಾಗೂ 7 ನೇ ಪ್ರತಿವಾದಿಯರು ಮೊದಲಿಗೆ ಒಟ್ಟಿಗೆ ವಾಸವಿದ್ದು, ಈಗ ನಾನು ಪ್ರತ್ಯೇಕವಾಗಿ ವಾಸವಿದ್ದು, 1, 6 ಮತ್ತು 7 ನೇ ಪ್ರತಿವಾದಿಯರು ಒಟ್ಟಿಗೆ ವಾಸವಿದ್ದಾರೆ. ನನ್ನ ಹಾಗೂ 7 ನೇ ಪ್ರತಿವಾದಿಯ ವಿವಾಹವಾಗಿರುತ್ತದೆ. ನಾನು ನನ್ನ ಮದುವೆಯಾಗುವವರೆಗೆ ನನ್ನ ತಂದೆ ತಾಯಿಯೊಂದಿಗೆ ವಾಸವಿದ್ದೆ. ನನ್ನ ಮದುವೆ 2021 ರಲ್ಲಿ ಆಗಿರುತ್ತದೆ. 2021 ರಂದು ನಾನು ಪ್ರತ್ಯೇಕವಾದ ನಂತರ ನಮಗೆ ಸಂಬಂಧಿಸಿ ಪ್ರತ್ಯೇಕ ಪಡಿತರ ಚೀಟಿ ಹಾಗೂ ಆಧಾರ ಕಾರ್ಡ್ ಇರುತ್ತದೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ನಾನು ಶಲವಡಿ ಗ್ರಾಮದಲ್ಲಿಯೇ ಪ್ರತ್ಯೇಕವಾಗಿ ಲಾಂಡೆಯವರ ಮನೆಯಲ್ಲಿ ಬಾಡಿಗೆಗೆ ವಾಸವಿದ್ದೇನೆ. ಸದರಿ ಬಾಡಿಗೆಗೆ ಸಂಬಂಧಿಸಿ ಯಾವುದೇ ಬಾಡಿಗೆ ಪತ್ರ ಇರುವುದಿಲ್ಲ. 7 ನೇ ಪ್ರತಿವಾದಿಯ ಮದುವೆ ನನ್ನ ಮದುವೆಗಿಂತ ಮುಂಚೆ ಆಗಿರುತ್ತದೆ. ನನ್ನ ಮದುವೆಯನ್ನು ನನ್ನ ತಂದೆ ತಾಯಿ ನೇರವೇರಿಸಿರುತ್ತಾರೆ. ನಾವೆಲ್ಲರೂ ಒಟ್ಟಿಗೆ ವಾಸವಿದ್ದು, ಪ್ರತ್ಯೇಕವಾಗಿ ವಾಸವಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರ ಹಾಗೂ ಪ್ರಮಾಣ ಪತ್ರವನ್ನು ಓದಿಕೊಂಡಿರುತ್ತೇನೆ. ವಾದ ಪತ್ರದ ಶಿರೋನಾಮೆಯಲ್ಲಿ ನನ್ನ ತಾಯಿ ಹಾಗೂ ಸಹೋದರರನನ್ನು ಕ್ರಮವಾಗಿ ಪ್ರತಿವಾದಿ 6 ಮತ್ತು 7 ಎಂದು ಕಾಣಿಸಲಾಗಿದ್ದು, ವಂಶಾವಳಿಯಲ್ಲಿ ಸದರಿಯವರನ್ನು ಪ್ರತಿವಾದಿ 2 ಮತ್ತು 3 ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ.

2. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿ ಶಲವಡಿ ಗ್ರಾಮದಲ್ಲಿ ವಿ ಪಿ ಸಿ ಸಂಃ 2399/ಬಿ ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿರುತ್ತವೆ. ಸದರಿ ಜಮೀನುಗಳಿಗೆ ಸಂಬಂಧಿಸಿ ನಾನು ದಾಖಲಾತಿಗಳನ್ನು ನೋಡಿರುತ್ತೇನೆ. ಸದರಿ ಆಸ್ತಿಗಳು ನನ್ನ ತಂದೆಗೆ ನನ್ನ ಅಜ್ಜನಿಂದ ಬಂದಿದ್ದು, ಆದರೆ ಯಾವಾಗ ಬಂದಿರುತ್ತವೆ ಎಂದು ಹೇಳಲಾಗುವುದಿಲ್ಲ. ನನ್ನ ಅಜ್ಜನಿಂದ ನನ್ನ ತಂದೆಗೆ ದಾವಾ ಆಸ್ತಿಗಳು ಬಂದ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಜಮೀನು ಸರ್ವೇ ನಂಃ457/2 ಹಾಗೂ 141/2 ಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಕಳೆದ 30 ವರ್ಷಗಳಿಂದ ನನ್ನ ತಂದೆಯ ಹೆಸರಿನಲ್ಲಿರುತ್ತವೆ. ನನ್ನ

ಅಜ್ಜನಿಂದ ನನ್ನ ತಂದೆಯ ಹೆಸರಿಗೆ ವರ್ಗಾವಣೆಯಾದ ಬಳಿಕ ನನ್ನ ತಂದೆ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ನಾನೂ ಸಹ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ನಮ್ಮ ಮನೆತನದ ಎಲ್ಲಾ ಜವಾಬ್ದಾರಿಯನ್ನು ನನ್ನ ತಂದೆ ನಿರ್ವಹಿಸುತ್ತಿದ್ದರು ಎಂದರೆ ಸರಿ. ನಮ್ಮ ಮನೆತನಕ್ಕೆ ಹಣದ ಅಡಚಣೆ ಉಂಟಾದಾಗ ಬ್ಯಾಂಕ್ ನಿಂದ ಸಾಲ ಪಡೆಯುವುದು ಹಾಗೂ ಇತರೆ ಕೆಲಸಗಳನ್ನು ನನ್ನ ತಂದೆ ನಿರ್ವಹಿಸುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ವಯಸ್ಕನಾದ ನಂತರ ನಾನೂ ಸಹ ನಿರ್ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು 2021 ರಿಂದ ಸದರಿ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದೇನೆ. ಬ್ಯಾಂಕಿನ ವ್ಯವಹಾರಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದು, ನಾನು ನಿರ್ವಹಿಸುತ್ತಿಲ್ಲ. ನಾನು ಪ್ರತ್ಯೇಕವಾದ ನಂತರ ನನ್ನ ಮನೆತನದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದೇನೆ. ನಾನು, ನನ್ನ ತಂದೆ ಹಾಗೂ ಸಹೋದರ ಒಕ್ಕಲುತನ ಕಾರ್ಯನಿರ್ವಹಿಸುತ್ತೇವೆ ಎಂದರೆ ಸರಿ. ನಾವು ಪ್ರತ್ಯೇಕವಾದ ಯಾವುದೇ ನೌಕರಿ ಮಾಡುವುದಿಲ್ಲ ಎಂದರೆ ಸರಿ.

3. 2 ಹಾಗೂ 8 ನೇ ಪ್ರತಿವಾದಿಯ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸದರಿಯವರಿಬ್ಬರು ತಂದೆ ಹಾಗೂ ಮಗ ಎಂದರೆ ಇರಬಹುದು. ಸದರಿಯವರು ಹೊಂಬಳ ಗ್ರಾಮದವರು. ಸದರಿಯವರ ಕುಟುಂಬಕ್ಕೆ ಪೆಟ್ರೋಲ್ ಬಂಕ್, ಜಮೀನುಗಳು ಹಾಗೂ ಟ್ರೇಡಿಂಗ್ ಕಂಪನಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ತನ್ನ ಹೆಂಡತಿ ಹಾಗೂ ಮಕ್ಕಳೊಂದಿಗೆ ವಾಸವಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಮದುವೆ ಆಮಂತ್ರಣ ಪತ್ರಿಕೆಯನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ಗುರುತಿಸಿದ ಕಾರಣ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. 2 ಮತ್ತು 8 ನೇ ಪ್ರತಿವಾದಿಯರು ಹೊಂಬಳ ಗ್ರಾಮದಲ್ಲಿ ಪ್ರತಿಷ್ಠಿತ ಮನೆತನದವರು ಎಂದರೆ ಸರಿ. ನನ್ನ ತಂದೆ ಕಳೆದ 7-8 ವರ್ಷಗಳಿಂದ ಜೂಜಾಟ, ಇಸ್ಪೇಟ್ ಆಟಗಳನ್ನು ನಮ್ಮ ಊರಿನಲ್ಲಿ ಆಡುತ್ತಿದ್ದರು. ಆದರೆ ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ನಾನು ದೂರು ಸಲ್ಲಿಸಿರುವುದಿಲ್ಲ. ನಾನು, 6 ಮತ್ತು 7 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯೊಂದಿಗೆ ಸಾರ್ವಜನಿಕರು ವ್ಯವಹಾರ ಮಾಡಬಾರದು ಎಂದು ಯಾವುದೇ ಎಚ್ಚರಿಕೆ ನೋಟಿಸ್ ನ್ನು ನೀಡಿರುವುದಿಲ್ಲ. ನನ್ನ ತಂದೆ ವಿವಿಧ ಬ್ಯಾಂಕ್ ಗಳಲ್ಲಿ 2015 ಕ್ಕಿಂತ ಮುಂಚೆ ಸಾಲ ಪಡೆದುಕೊಂಡಿರುತ್ತಾರೆ. ಅದರ ನಂತರ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ. ನನ್ನ ತಂದೆ ಇವತ್ತಿನವರೆಗೆ ಬ್ಯಾಂಕ್ ಗಳಲ್ಲಿ ಸಾಲ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 4 ಮತ್ತು 5 ನೇ ಖಂಡಿಕೆಗಳಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ನಿಪಿ-13 ರಲ್ಲಿರುವ ಪ್ರತಿವಾದಿ 1, 6 ಮತ್ತು 7 ರ ಸಹಿಗಳನ್ನು ನೋಡಿ

ಗುರುಸಿರುತ್ತಾರೆ. ಸಾಕ್ಷಿಯು ನಿಪಿ-12 ರಲ್ಲಿರುವ ಪ್ರತಿವಾದಿ 1 ರವರ ಸಹಿಗಳನ್ನು ನೋಡಿ ಗುರುಸಿರುತ್ತಾರೆ. ಅದೇ ರೀತಿ ಸಾಕ್ಷಿಯು ನಿಪಿ-14 ರಲ್ಲಿರುವ ಪ್ರತಿವಾದಿ 1 ರವರ ಸಹಿಗಳನ್ನು ನೋಡಿ ಗುರುಸಿರುತ್ತಾರೆ. ನನ್ನ ತಂದೆ, ತಾಯಿ ಹಾಗೂ ತಮ್ಮ ಒಟ್ಟಿಗೆ ವಾಸವಿದ್ದು, ಸದರಿಯವರ ಕುಟುಂಬದ ವ್ಯವಹಾರಗಳನ್ನು ನನ್ನ ತಂದೆ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ದುಷ್ಚಟ ಶುರುಮಾಡುವುದಕ್ಕಿಂತ ಮುಂಚೆ ನಿರ್ವಹಿಸುತ್ತಿದ್ದರು ಎಂದು ನುಡಿದಿರುತ್ತಾರೆ. ನನ್ನ ತಂದೆ ಯಾವ ವರ್ಷದಿಂದ ಮದ್ಯ ಸೇವಿಸಲು ಪ್ರಾರಂಭಿಸಿದರು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**